ನೀರನ್ನು ಬಿಡುತ್ತೀರಿ? ರೈತರಿಗೆ ಅನುಕೂಲವನ್ನು ಯಾವಾಗ ಕಲ್ಪಿಸಿಕೊಡುತ್ತೀರಿ ಎಂಬುವುದನ್ನು ತಿಳಿಸಬೇಕು ಎಂದು ಹೇಳಿ ನಾನು ತಮ್ಮ ಮೂಲಕ ನೀರಾವರಿ ಸಚಿವರ ಗಮನವನ್ನು ಸೆಳೆಯುತ್ತಾ ಇದ್ದೇನೆ.

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಮಸ್ವಾಮಿಯವರು ಎತ್ತಿರತಕ್ಕಂಥ ವಿಚಾರದಲ್ಲಿ ಸೂಕ್ಷ್ಮವಾಗಿ ಹೇಳುವುದಾದರೆ, 16.07.96ರಂದು ನಮ್ಮ ಎಡದಂಡೆ ನಾಲೆಗೆ 850 ಕ್ಯೂಸೆಕ್ಸ್ ನೀರನ್ನು ಬಿಡಲಾಗಿದೆ. ಆದ್ದರಿಂದ ಅವರು ಹೇಳಿದಂತೆ ಸ್ವಲ್ಪ ಕಾಮಗಾರಿಯ ಅಂತ್ಯದ ಸಮಯದಲ್ಲಿ ಕೆಲಸವಿದ್ದುದರಿಂದ, 10ನೇ ತಾರೀಖಿನಂದು ಮಾಡಬೇಕಾದ ಕೆಲಸವನ್ನು 16ನೇ ತಾರೀಖಿಗೆ ಹಾಕಿಕೊಂಡಿದ್ದಾರೆ. 850 ಕ್ಯೂಸೆಕ್ಸ್ ನೀರನ್ನು ಬಿಡುಗಡೆ ಮಾಡಿರುವುದರಿಂದ ಈ ಸಮಸ್ಯೆ ಬಗೆಹರಿದಿದೆ ಎಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಎ.ಟಿ.ರಾಮಸ್ವಾಮಿ:- ಮಾನ್ಯ ಮಂತ್ರಿಗಳು ನೀರನ್ನು ಬಿಟ್ಟಿದ್ದೇವೆ ಎಂದು ಹೇಳಿದರು. ಆದರೆ ಹೇಮಾವತಿ ಬಲ ಮೇಲ್ದಂಡೆಗೆ ಏಕೆ ನೀರು ಬಿಟ್ಟಲ್ಲ? ಏನು ತೊಂದರೆ ಇದೆ? ನೀವೇ ಈ ಸದನದಲ್ಲಿ ಹೇಳಿದಿರಿ, ರೈತರ ಬೆಳೆಗಳಿಗೆ ನಮ್ಮಲ್ಲಿ ನೀರು ಲಭ್ಯ ಇದೆ ಎಂದು...

ಶ್ರೀ ಕೆ.ಎನ್.ನಾಗೇಗೌಡ:- ತಮ್ಮ ಮುಖಾಂತರ ರಾಮಸ್ವಾಮಿಯವರಿಗೆ ತಿಳಿಸುವಂತದ್ದು, 16ನೇ ತಾರೀಖಿನಿಂದ ಬಲದಂಡೆ ನಾಲೆಗೆ ಸಹ 150 ಕ್ಯೂಸೆಕ್ಸ್‌ನಂತೆ....

ಶ್ರೀ ಎ.ಟಿ.ರಾಮಸ್ವಾಮಿ:- ಬಲ ಮೇಲ್ದಂಡೆ ನಾಲೆ...

ಶ್ರೀ ಕೆ.ಎನ್.ನಾಗೇಗೌಡ:- ಆ ಬಲ ಮೇಲ್ದಂಡೆ ನಾಲೆದು ಹೆಡ್ ಸಿಕ್ಕಿಲ್ಲ ಎಂದು ಇನ್ನೂ ಮಾಡಿಲ್ಲ ಬಹುಶಃ ಬೇಗನೆ ಮಾಡಿಸಿಕೊಡುತ್ತೇನೆ.

(ಈ) ಕೊಡಗಿನಲ್ಲಿ ಆಂದೋಲನ ಪತ್ರಿಕೆಯಲ್ಲಿ ಕೊಡಗಿನ ನಾಗರೀಕರಿಗೆ ಒಂದು ಸಂತೋಷದ ಸುದ್ದಿ ಎಂದು ಒಂದು ಜಾಹಿರಾತನ್ನು ಕೊಟ್ಟಿರುವುದು.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಸೋಮವಾರ ಪೇಟೆ):- ಸನ್ಮಾನ್ಯ ಉಪಾಧ್ಯಕ್ಷರೆ, ಕೊಡಗಿನಲ್ಲಿ 'ಆಂದೋಲನ' ಪತ್ರಿಕೆಯಲ್ಲಿ ಕೊಡಗಿನ ನಾಗರೀಕರಿಗೆ ಒಂದು ಸಂತೋಷದ ಸುದ್ದಿ ಎಂದು ಹೇಳಿ ಒಂದು ಜಾಹಿರಾತನ್ನು ಕೊಟ್ಟಿದ್ದಾರೆ. ಸರ್ಕಾರದಿಂದ ಮಾನ್ಯತೆ ಪಡೆದ ರಿಜಿಸ್ಟರ್ ನಂ.424, 1991ರಲ್ಲಿ ರಿಜಿಸ್ಟರ್ ಆಗಿದೆ ಎಂದು ಕೊಟ್ಟಿದ್ದಾರೆ. ಚೆನ್ನಮ್ಮ ಹೆಚ್.ಡಿ.ದೇವೇಗೌಡ ಟಿ.ಸಿ.ಎಚ್. ಮತ್ತು ಮೊದಲನೇ ವರ್ಷದ ಪಿ.ಯು.ಸಿ.ಸೋಮವಾರ ಪೇಟೆಯಲ್ಲಿ ತೆರೆಯಲಾಗುವುದು ಎಂದು ಕೊಟ್ಟಿದ್ದಾರೆ. ಅದರ ಜೊತೆಗೆ ಮೈಸೂರು ವಿಳಾಸವನ್ನು ಸಹ ಕೊಟ್ಟಿದ್ದಾರೆ, ಕೊಡಗಿನ ವಿದ್ಯಾರ್ಥಿಗಳಿಗೆ ಪ್ರಥಮ ಆದ್ಯತೆ, ಮೈಸೂರಿನ ವಿಳಾಸ : ಚೆನ್ನಮ್ಮ ಎಚ್.ಡಿ.ದೇವೇಗೌಡ ಡಿ-ಫಾರ್ಮಸಿ ಕಾಲೇಜ್ ಮತ್ತು ನರ್ಸಿಂಗ್ ಸ್ಕೂಲ್ ಆಫ್ ಕಾಲೇಜ್, ಬಲ್ಲಾಳ ಸರ್ಕಲ್, ಮೈಸೂರು

ಎಂದು ಕೊಟ್ಟಿದ್ದಾರೆ. ಕಾಂಟಾಕ್ಟ್ ಅಡ್ರೆಸ್ ಏನು ಕೊಟ್ಟಿದ್ದಾರೆಂದರೆ, ಡಾಕ್ಟರ್ ವಿ.ಪಿ.ರೆಡ್ಡಿ, ವಿನಾಯಕ ನರ್ಸಿಂಗ್ ಹೋಂ, ಮೈಸೂರು ಎಂದು ಕೊಟ್ಟಿದ್ದಾರೆ. ಈ ರೀತಿ ಕೊಡಗಿನ ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಟಿ.ಸಿ.ಎಚ್.ಅನ್ನು ತೆರೆಯುತ್ತೇವೆ ಎಂದು ಹೇಳಿ ಹಣವನ್ನೂ ಕೂಡ ಲಪಟಾಯಿಸಿದ್ದಾರೆ. ಕಳೆದಸಾರಿ ತಿಪಟೂರಿನಲ್ಲಿ ನಡೆದಿತ್ತಂತೆ. ಆ ಸಂದರ್ಭದಲ್ಲಿ ಕೂಡ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ವಿಚಾರಣೆ ಮಾಡಲಿಲ್ಲ ಎಂದು ಕಾಣುತ್ತದೆ. ಈ ರೀತಿ ಮೋಸದ ಜಾಲ ಸೋಮವಾರ ಪೇಟೆಯಲ್ಲಿ ನಡೆದಿದೆ. ಇದನ್ನು ತಾವು ವಿಚಾರಣೆ ಮಾಡಿ ಯಾರು ಹಣವನ್ನು ಕೊಟ್ಟಿದ್ದಾರೆ ಅವರಿಗೆ ವಾಪಸ್ಸು ಪಡೆಯುವಂತೆ ಮಾಡಬೇಕು. ಇದು ಪ್ರಧಾನಮಂತ್ರಿಯವರ ಹೆಸರಿಗೆ ಕಳಂಕವನ್ನು ತರುವಂಥ ಪ್ರಯತ್ನ ಎಂದು ಹೇಳಿದರೂ ಕೂಡ ತಪ್ಪಾಗಲಾರದು. ಇದನ್ನು ಆದಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಬೇಡಿಕೊಳ್ಳುತ್ತೇನೆ ಜೊತೆಗೆ ಈ ಪತ್ರಿಕೆಯನ್ನು ಕೂಡ ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಅವರು ಏನು ವಿಷಯಗಳನ್ನು ಹೇಳಿದ್ದಾರೆ, ಇದರ ಬಗ್ಗೆ 1995-96ನೇ ಸಾಲಿನಲ್ಲಿ 105 ಅನಧಿಕೃತ ಟಿ.ಸಿ.ಎಚ್.ಕಾಲೇಜುಗಳನ್ನು ಮುಚ್ಚಲಾಗಿದೆ. ಮಾನವೀಯತೆಯ ದೃಷ್ಟಿಯಿಂದ ಈ ಕಾಲೇಜುಗಳಲ್ಲಿದ್ದ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. 1996-97ನೇ ಸಾಲಿನಲ್ಲಿ ಯಾವ ಅನಧಿಕೃತ ಟಿ.ಸಿ.ಎಚ್. ಕಾಲೇಜುಗಳನ್ನು ಕಾರ್ಯನಿರ್ವಹಿಸಲು ಅವಕಾಶ ಕೊಡುವುದಿಲ್ಲ. ಅಲ್ಲದೆ ಟಿ.ಸಿ.ಎಚ್ ಮತ್ತು ಬಿ.ಎಡ್.ಗಳಿಗೆ ಪ್ರವೇಶವನ್ನು ರಾಜ್ಯಮಟ್ಟದಲ್ಲಿ ಸರ್ಕಾವೇ ಮಾಡುವುದರಿಂದ ಈ ಅನಧಿಕೃತ ಸಂಸ್ಥೆಗಳು ಮತ್ತೆ ಹುಟ್ಟಿಬರಲು ಅವಕಾಶ ಇರುವುದಿಲ್ಲ. ಸೋಮವಾರ ಪೇಟೆಯ ಮೇಲ್ಕಂಡ ಟಿ.ಸಿ.ಎಚ್.ಕಾಲೇಜಿಗೂ ಇದು ಅನ್ವಯವಾಗುತ್ತದೆ.

ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ):- ಇಲ್ಲ ಪ್ರಶ್ನೆ ಇರುವಂಥದ್ದು, ಕೊಡಗು ಜಿಲ್ಲೆಯಲ್ಲಿ ಈ ತರಹ ಒಂದು ಸಂಸ್ಥೆಯನ್ನು ಪ್ರಾರಂಭಿಸಿ ಸುಮಾರು ಆರು ಲಕ್ಷ ರೂಪಾಯಿಗಳನ್ನು ಕೊಳ್ಳೆಹೊಡೆದು ಹೋಗಿದ್ದಾರೆ. ಕೊಡಗು ಜಿಲ್ಲೆ ಏನಾಗಿದೆ ಎಂದು ಹೇಳಿದರೆ ಇವೊತ್ತು ಕಾಫಿಯ ಬೆಳೆ ಬಂದಾಗ ಸುಮಾರು 15 ಕೋಟಿ ರೂಪಾಯಿಯನ್ನು ಈ ರೀತಿ ಮೋಸ ಮಾಡಿದಂಥ ಸುಮಾರು ಜನ ವ್ಯಕ್ತಿಗಳಿದ್ದಾರೆ. ಇದರಿಂದ ಏನು ಕಾಣುತ್ತದೆ ಎಂದು ಹೇಳಿದರೆ, ಕೊಡಗು ಜಿಲ್ಲೆ ಶಾಂತಿಯ ಜಿಲ್ಲೆಯಾಗಿರಬಹುದು, ಪ್ರೀತಿಯ ಜಿಲ್ಲೆಯಾಗಿರಬಹುದು. ಆದರೆ ಕೊಡಗು ಜಿಲ್ಲೆಯಲ್ಲಿ ಕಳ್ಳರ ಕಾಟ ಹೆಚ್ಚಾಗುತ್ತಿದೆ. ಪ್ರಧಾನಮಂತ್ರಿಯವರ ಹೆಸರು ಹೇಳಿ ಈ ಹಣವನ್ನು ಲಪಟಾಯಿಸಿದ್ದು, ಯಾವ ಜಿಲ್ಲೆ ಇವೊತ್ತು ಸೈನಿಕರನ್ನು ಕೊಟ್ಟಿರಬಹುದು, ಇಂತಹ ಜಿಲ್ಲೆಯಲ್ಲಿ ಕಳ್ಳತನ ಹೆಚ್ಚಾಗಿದೆ. ಪೋಲೀಸ್ ವ್ಯವಸ್ಥೆ ಕುಸಿದಿದೆ ಎಂದು ಹೇಳುತ್ತೇನೆ. ಇವರನ್ನು ಹಿಡಿಯುವಂಥ ವ್ಯವಸ್ಥೆ ಆಗುತ್ತಿಲ್ಲ ಇದು ನಮ್ಮ ಬೇಡಿಕೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವು ಹೇಳಿರುವಂಥದ್ದರಲ್ಲಿ ಎರಡು ಮಾತಿಲ್ಲ. ಇವೊತ್ತು ನಮ್ಮ ದೊಡ್ಡವರ ಹೆಸರು ಉಪಯೋಗವಾಗಿದೆ, ಬಹಳ ಮುಖ್ಯವಾಗಿರುವಂಥದ್ದು ಪತ್ರಿಕೆಯಲ್ಲಿ ಅರ್ಧಪುಟ ಜಾಹೀರಾತನ್ನು ಕೊಟ್ಟಿರುವುದನ್ನು ತಾವು ಗಮನಿಸಬೇಕು. ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ ಎಸ್‌ಸಿಇಟಿ ಆರ್ 424-ಇಎಸ್‌ಟಿ: 1991 ಎಂದು ಪ್ರಕಟಣೆ ಮಾಡಿ, ಇವೊತ್ತು ಚೆನ್ನಮ್ಮ ಎಚ್.ಡಿ.ದೇವೇಗೌಡ ಟಿ.ಸಿ.ಎಚ್.ಮತ್ತು ಮೊದಲನೇ ವರ್ಷ ಪಿ.ಯು.ಸಿ.ಕಾಲೇಜು ಎಂದು ಹೇಳಿ ಪ್ರಕಟಣೆ ಮಾಡಿ ದುಡ್ಡು ಸಂಗ್ರಹ ಮಾಡಿದ್ದಾರೆ ಎನ್ನುವುದು ಅವರ ಆರೋಪ. ಇದು ಮಾನ್ಯತೆ ಪಡೆಯದೇ ಇದ್ದರೆ, ಈ ರೀತಿ ಪತ್ರಿಕೆಗಳಲ್ಲಿ ಪ್ರಚಾರ ಕೊಟ್ಟಾಗ, ಸಹಜವಾಗಿ ಯಾರೇ ಇರಬಹುದು ಅದು ಯಡಿಯೂರಪ್ಪ ಇರಬಹುದು, ಮತ್ತೊಬ್ಬರು ಇರಬಹುದು, ಶಿಕ್ಷಣ ಸಂಸ್ಥೆಯನ್ನು ಪ್ರಾರಂಭ ಮಾಡಿದಾಗ, ಮಾನ್ಯತೆ ಎಂದು ಹಣ ಸಂಗ್ರಹ ಮಾಡಿದಮೇಲೆ ಕಷ್ಟಪಟ್ಟು ಸಂಸ್ಥೆಯನ್ನು ನಡೆಸಿ ಅದನ್ನು ಉಳಿಸಿಕೊಳ್ಳುವಂಥ ಪ್ರಯತ್ನ ಮಾಡಿ ಮಾನ್ಯತೆಯನ್ನು ಉಳಿಸಿಕೊಳ್ಳಲಿ. ಆದರೆ ಯಾರು ಇವೊತ್ತು ಬಡವರು ಹತ್ತಾರು ಸಾವಿರ ರೂಪಾಯಿಗಳನ್ನು ಕೊಟ್ಟು ಸಿಕ್ಕಿಕೊಂಡಿದ್ದಾರೆ, ಲಕ್ಷಾಂತರ ರೂಪಾಯಿ ಸಂಗ್ರಹ ಮಾಡಿ ಸರ್ಕಾರದಿಂದ ಮಾನ್ಯತೆ ಪಡೆದಿದೆ ಎಂದು ಅರ್ಧ ಪೇಜ್ ಪೇಪರ್ ಅಡ್ವರ್ಟೈಸ್‌ಮೆಂಟ್ ಮಾಡಿ ಹಣ ಸಂಗ್ರಹ ಮಾಡಿ ಇವೊತ್ತು ಪತ್ತೆ ಇಲ್ಲ ಎಂದರೆ, ಅವನ ಮೇಲೆ ಕ್ರಿಮನಲ್ ಮೊಕದ್ದಮೆ ಹೂಡಿ. ಅಲ್ಲಿ ಸರ್ಕಾರದ ಅನುಮತಿ ಇದೆ ಎಂದು ಅನೌನ್ಸ್ ಮಾಡಿದ ಮೇಲೆ ಜನರು ಅದನ್ನು ನಂಬಿಯೇ ನಂಬುತ್ತಾರೆ. ಅದು ಟಿ.ಸಿ.ಹೆಚ್., ಅಥವಾ ಬಿ.ಎಡ್.ಆಗಿರಬಹುದು ಅಥವಾ ಇನ್ನಾವುದೇ ಇರಬಹುದು. ಈ ರೀತಿಯಾಗಿ ಹಣವನ್ನು ಮೋಸ ಮಾಡಿ ಸಂಗ್ರಹ ಮಾಡಿದ ಮೇಲೆ ಕಾಲೇಜ್‌ಗೆ ಮಂಜೂರಾತಿ ಸಿಗದಿದ್ದರೆ ದುಡ್ಡು ವಾಪಸ್ಸು ಕೊಡಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಈ ರೀತಿಯಾಗಿದೆ ಮತ್ತೆ ಎಕ್ಸಾಮಿನೇಷನ್ ತೆಗೆದುಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಬೇಕು. ಇದನ್ನು ಮಾನ್ಯ ಸಚಿವರ ಗಮನಕ್ಕೆ ಏಕೆ ತರುವುದೆಂದರೆ ಸಂಗ್ರಹ ಮಾಡಿದಂತಹ ಹಣವನ್ನು ವಾಪಸ್ಸು ಕೊಡುವಂತಹ ಪ್ರಯತ್ನ ಮಾಡಿ, ಸರ್ಕಾರ ಮಾನ್ಯತೆ ಕೊಟ್ಟಿದ್ದಾರೆ ಎಂದು ಹೇಳಿ ಹಣವನ್ನು ದುರುಪಯೋಗ ಮಾಡಿದ್ದಾರೆ. ಅಂದಮೇಲೆ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುವಂಥಾದ್ದನ್ನು ಮಾಡಬೇಕು, ಮತ್ತೆ ಇದು ಆಗದಂತೆ ನೋಡಿಕೊಳುತ್ತೇವೆಂದರೆ ಉತ್ತರ ಸಮರ್ಪಕವಾಗುತ್ತದೆ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ನಂಜಮರಿ:- ಮಾನ್ಯ ಅಧ್ಯಕ್ಷರೆ, ತಿಪಟೂರು ಕ್ಷೇತ್ರದಲ್ಲಿ 6ತಿಂಗಳುಗಳ ಕಾಲ ಟಿ.ಸಿಹೆಚ್ ಕಾಲೇಜು ಓಪನ್ ಮಾಡಿ ಸುಮಾರು ಟೀಚರ್ಸ್‌ಗಳಿಂದ ಹಣವನ್ನು ವಸೂಲು ಮಾಡಿ ರಾತ್ರೋರಾತ್ರಿ ಎಲ್ಲಾ ಬಿಟ್ಟು ಹೋಗಿದ್ದ, ಚೆನ್ನಮ್ಮ ದೇವೇಗೌಡರ ಹೆಸರಿನಲ್ಲಿ ಮಾಡಿದ ವ್ಯಕ್ತಿಯೆ ಮಾಡಿದ್ದಾನೆ.

(ಮುಂದಲ)

ಉಪಾಧ್ಯಕ್ಷರು:- ಎಲ್ಲರೂ ಶೂನ್ಯವೇಳೆಯಲ್ಲಿ ಮಾತನಾಡಿದರೆ ಹೇಗೆ?

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾವು ಇಲ್ಲಿ ಸಚಿವರ ಮೇಲೆ ಆರೋಪ ಮಾಡುತ್ತಿಲ್ಲ. ಅಲ್ಲಿ ಜಿಲ್ಲಾಧಿಕಾರಿಗಳು ಇದ್ದಾರೆ. ಈ ರೀತಿ ಅನೌನ್ಸ್ ಮಾಡದೇ ಸರ್ಕಾರದ ಅನುಮತಿ ಅದಕ್ಕೆ ಇದೆಯೋ ಇಲ್ಲವೊ ಎನ್ನುವುದನ್ನು ನೋಡದೇ...

ಉಪಾಧ್ಯಕ್ಷರು:- ಶೂನ್ಯ ವೇಳೆಯಲ್ಲಿ ತಾವು ಪ್ರಸ್ತಾಪ ಮಾಡಿ ಈ ರೀತಿ ಮಾಡಿದರೆ ಹೇಗೆ, ತಾವು ಪ್ರತ್ಯೇಕವಾಗಿ ನೋಟೀಸ್ ಕಳುಹಿಸಿಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೆ, ಅವರು ಹೇಳುವುದೇನೆಂದರೆ ತಿಪಟೂರಿನಲ್ಲಿ ಕೂಡ ಇವರೆ ಬಂದು ಇದೇ ರೀತಿಯಲ್ಲಿ ಮಾಡಿದ್ದಾರೆಂದು ಹೇಳಿದ್ದಾರೆ.

ಶ್ರೀ ಹೆಚ್.ಜಿ.ಗೊವಿಂದೇಗೌಡ:- ಈ ದೇಶದಲ್ಲಿ ನ್ಯಾಯ, ಅನ್ಯಾಯ ವಿಮರ್ಶೆ ಮಾಡುವಂತಹ ಜವಬ್ದಾರಿ ಎಲ್ಲರ ಮೇಲೂ ಇದೆ, ಯಾವ ಅಧಿಕಾರಿಗಳು ಎಂಬ ಬಗ್ಗೆ ನಮಗೆ ತಿಳಿಸಿದರೆ ಖಂಡಿತವಾಗಿ ನಾನು ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹಿಂಜರಿಯುವುದಿಲ್ಲ. ನಾವು ಯಾರ ಆಮಿಷಕ್ಕೂ ಒಳಗಾಗಿ ಕೆಲಸ ಮಾಡಬೇಕಾದಂತಹ ಅವಶ್ಯಕತೆ ಇಲ್ಲ. ಈಗ ತಾವು ಏನು ಹೇಳಿದ್ದೀರಿ, ಹೆಸರುಗಳನ್ನು ಹೇಳಿ ಹೆಸರಿನ ಬಗ್ಗೆ ನಾನು ಮಾತನಾಡುವುದಿಲ್ಲ. ಬಹಳ ವರ್ಷಗಳಿಂದ ಅನಧಿಕೃತವಾಗಿ ನಡೆಯುತ್ತಿದ್ದಂತಹ ಸಂಸ್ಥೆಗಳನ್ನು ಒಂದೂವರೆ ವರ್ಷದಿಂದ 105 ಅನಧಿಕೃತವಾದ ಟಿ.ಸಿ.ಹೆಚ್.ಸಂಸ್ತೆಗಳನ್ನು ಮುಚ್ಚುವಂತಹ ಧೈರ್ಯವನ್ನು ಮಾಡಿದಂತಹ ಸರ್ಕಾರವಾಗಿದೆ. ಯಾವ ಆಮಿಷಕ್ಕೂ ಒಳಗಾಬೇಕಾದಂತಹ ಅವಶ್ಯಕತೆ ಇಲ್ಲ. ಆದರೆ ಈ ರೀತಿ ಯಾರು ಮಾಡಿದ್ದಾರೆ ಅದನ್ನು ನೀವು ನನಗೆ ಮಾಹಿತಿಯನ್ನು ಕೊಡಿ, ಅವರ ಮೇಲೆ ಕಠಿಣವಾದಂತಹ ಕ್ರಮವನ್ನು ತೆಗೆದುಕೊಳ್ಳುವಂಥಾದ್ದು ನಮ್ಮ ಉದ್ದೇಶವಾಗಿದೆ.

(ಗೊಂದಲ)

ಶ್ರೀ ಹೆಚ್.ಜಿ.ಗೋವಿಂದೇಗೌಡ:- ನನಗೆ ಅರ್ಥವಾಗುತ್ತಿಲ್ಲ. ಈ ಪ್ರಜಾಪ್ರಭುತ್ವದಲ್ಲಿ ಮಾನ್ಯ ದೇವೇಗೌಡರ ಹೆಸರನ್ನೇ ಅಲ್ಲ, ಅನೇಕ ಜನರ ಹೆಸರುಗಳನ್ನು ಬೇಕಾದವರು ಬೇಕಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದು. ಅದಕ್ಕೆ ಸಂಬಂಧವಿಲ್ಲ. ಆದರೆ ಎಲ್ಲಿ ಇಲ್ಲೀಗಲ್ ಆಗಿದೆ, ಎಲ್ಲಿ ತಪ್ಪಾಗಿದೆ ಎಂದು ಹೇಳಿ, ಅದರ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ಇದ್ದೇನೆ. ಇದರ ಬಗ್ಗೆ ನಾನು ಸುಮ್ಮನೆ ವಾಖ್ಯಾನ ಮಾಡುವುದಿಲ್ಲ. ನ್ಯಾಯಯುತವಾಗಿ ನಾನು ಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ದನಿದ್ದೇನೆ. ಆದರೆ ನೀವು ಹೇಳಿದ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಉಪಾಧ್ಯಕ್ಷರು:- ಈಗಾಗಲೇ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆ.

ತಾವೆಲ್ಲ ಕುಳಿತುಕೊಳ್ಳಿ, ಮಾನ್ಯ ಮಂತ್ರಿಯವರು ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

(ಉ) ತುಂಗಾಭದ್ರಾ ಎಡದಂಡೆ ಕಾಲುವೆಯ ರಿಪೇರಿ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಾಲ್):- ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ತುಂಗಭದ್ರಾ ಎಡದಂಡೆ ಕಾಲುವೆ ಬಗ್ಗೆ ನಾನು ನೋಟೀಸ್ ಕೊಟ್ಟಿದ್ದೆ. ಆದರೆ ಕಾರಣಾಂತರದಿಂದ ಈ ಎರಡು ಮೂರು ದಿವಸಗಳಿಂದ ಅದನ್ನು ಚರ್ಚೆಗೆ ತೆಗೆದುಕೊಂಡಿಲ್ಲ. ಈಗ ಅದನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿ ಎಂದು ಹೇಳಿದ ಮೇಲೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ತುಂಗಭದ್ರಾ ನಾಲೆ ಇಡೀ ರಾಯಚೂರ್ ಜಿಲ್ಲೆಯ ರೈತರಿಗೆ ಅವರ ಜೀವನಕ್ಕೆ ನೇರವಾಗಿ ಸಂಬಂಧಪಡುವಂಥಾದ್ದು, ಸುಮಾರು 0ಕಿ.ಮೀ ನಿಂದ 192ಕಿ.ಮೀ. ಉದ್ದವಿರುವಂತಹ ಈ ನಾಲೆಯನ್ನು ರಿಪೇರಿಗೆ ತೆಗೆದುಕೊಳ್ಳಬೇಕೆಂದು ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿತ್ತು. ಹಿಂದೆ ಶ್ರೀ ಕೆ.ಸಿ.ರೆಡ್ಡಿಯವರು ಪಿ.ಡಬ್ಲ್ಯೂ.ಡಿಯ ಸೆಕ್ರೆಟರಿಯಾಗಿದ್ದರು. ಪವರ್ ಕಾರ್ಪೊರೇಷನ್‌ನ ಎಂ.ಡಿ.ಯು ಆಗಿದ್ದರು. 1977-78ರಲ್ಲಿ ಅವರ ಅಧ್ಯಕ್ಷತೆಯಲ್ಲಿ ಈ ಕಾಲುವೆಯನ್ನು ಸ್ಟೆಂಗ್ತನ್ ಮಾಡುವ ಬಗ್ಗೆ ಒಂದು ರಿಪೋರ್ಟ್ ತಯಾರು ಮಾಡಿ ಎಂದು ಹೇಳಿ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಿದರು. ಅವರು ಪೂರ್ತಿ ನಾಲೆಯನ್ನು ತನಿಖೆ ಮಾಡಿ ಈ ಕಮಿಟಿಯವರು 1983ರಲ್ಲಿ ಒಂದು ವರದಿಯನ್ನು ಕೊಟ್ಟರು. ಆ ವರದಿಯ ಆಧಾರದ ಮೇಲೆ ಹಂತ ಹಂತವಾಗಿ ಬ್ರೀಚ್ ಆಗುವಂತಹ ಕಾಲುವೆಯನ್ನು ಸ್ಟೆಂಗ್ತನ್ ಮಾಡಬೇಕೆಂದು ರೂಪರೇಶೆಗಳನ್ನು ಹಾಕಬೇಕೆಂದು ಒಂದು ವರದಿಯನ್ನು ಮಾಡಿ ಕೊಟ್ಟಿತ್ತು. ಅದರ ಪ್ರಕಾರ ಸರ್ಕಾರವು ಹಣವನ್ನು ಬಿಡುಗಡೆ ಮಾಡಬೇಕೆಂದು ಆಯಿತು. ಆದರೆ ಕಾರಣಾಂತರದಿಂದ ಹಣ ಬಿಡುಗಡೆಯಾಗಲಿಲ್ಲ. ಕೊನೆಗೆ 1993-94ರಲ್ಲಿ ಮತ್ತು 1994-95ರಲ್ಲಿ ಶ್ರೀಮಾನ್ ವೀರಪ್ಪಮೊಯಿಲಿಯವರು ಇದ್ದಾಗ ಹಣವನ್ನು ಬಿಡುಗಡೆ ಮಾಡಿದರು. ಆಗ ಈ ರಿಪೇರಿ ಕೆಲಸ ಪ್ರಾರಂಭವಾಯಿತು. ಪುನಃ ಈ ವರ್ಷ ಈ ಕಾಲುವೆಯನ್ನು ಸ್ಟೆಂಗ್ತನ್ ಮಾಡಬೇಕೆಂದು ಏಪ್ರಿಲ್ ತಿಂಗಳ ಕೊನೆಯಲ್ಲಿ ಇದನ್ನು ಪೂರ್ಣಮಾಡಬೇಕು ಅಥವಾ ಮೇ ತಿಂಗಳಲ್ಲಿ ಕೆಲಸ ಪ್ರಾರಂಭ ಮಾಡಿ ಜೂನ್ ಅಂತ್ಯದಲ್ಲಿ ಇಲ್ಲದಿದ್ದರೆ ಜುಲೈ ಮೊದಲ ವಾರದಲ್ಲಿ ಈ ಕೆಲಸವನ್ನು ಪೂರ್ತಿ ಮಾಡಿ ರೈತರು ನೀರನ್ನು ಉಪಯೋಗಿಸುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಆಯಿತು. ಈ ತುಂಗಭದ್ರಾ ಎಡದಂಡೆ ನಾಲೆಯಿಂದ ಸುಮಾರು 3ಲಕ್ಷ 75ಸಾವಿರ ಎಕರೆಗೆ ಅನುಕೂಲವಾಗುವುದು. ಸರ್ಕಾರ ಈ ಕಾಲುವೆಯ ರಿಪೇರಿ ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿದ ಮೇಲೆ ಪ್ರಾರಂಭ ಮಾಡಬೇಕಾಗಿತ್ತು. ಇವರು ನಿರ್ಣಯವನ್ನು ತೆಗೆದುಕೊಳ್ಳಲು ಒಂದು ತಿಂಗಳ ತೆಗೆದುಕೊಂಡರು.

2.10 ಪಿ.ಎಂ.

ಏಕೆಂದರೆ ಅಲ್ಲಿನ ರಾಜಕೀಯ ನಾಯಕರು ಏನಿದ್ದಾರೆ, ಕಂಟ್ರಾಕ್ಟರ್ಸ್ ಈ ಇಬ್ಬರೂ